ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರ ಕೊಠಡಿಯಲ್ಲಿ ದಿನಾಂಕ 14/03/2019 ಮತ್ತು 20/03/2019 ರಂದು ನಡೆದ ಸಮಾಲೋಚನಾ ಸಭೆಯ ನಡವಳಿಗಳು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು 2019-20ನೇ ಸಾಲಿನ ಕ್ರಿಯಾ ಯೋಜನೆ ಸಂಬಂಧ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ರಸ್ತೆಗಳ ಬಾಬ್ತಿಗೆ ಸಂಬಂಧಿಸಿದಂತೆ ಒದಗಿಸಲಾಗಿರುವ ಅನುದಾನ ಮತ್ತು ವಿನಿಯೋಗ ಕುರಿತು ಮಾನ್ಯ ಸಚಿವರಿಗೆ ವಿವರಿಸಿದರು. ಆಯುಕ್ತರು ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಲಾಖೆ, ನಿರ್ದೇಶಕರು ಗ್ರಾಮ ವಿಕಾಸ, ಮುಖ್ಯ ಇಂಜಿನೀಯರ್ RDWSD ಹಾಗೂ ಮುಖ್ಯ ಇಂಜಿನೀಯರ್ KRRDA ಮತ್ತು ಮುಖ್ಯ ಇಂಜಿನೀಯರ್ PRED ಹಾಗೂ ಮತ್ತಿತರೆ ಹಿರಿಯ ಅಧಿಕಾರಿಗಳು 2018-19ರ ಸಾಲಿನಲ್ಲಿ ಕೈಗೊಂಡಿರುವ ಸುಧಾರಣಾ ಕ್ರಮಗಳು, ಅದರ ಪರಿಣಾಮಗಳು, ಮಾರ್ಚ್ 2019ರ ಅಂತ್ಯದವರೆಗೆ ಆಗಬಹುದಾದ ಸಂಭವನೀಯ ವೆಚ್ಚ ಮತ್ತು 2019-20ರ ಸಾಲಿನಲ್ಲಿ ಕ್ರಿಯಾ ಯೋಜನೆ ರೂಪಿಸುವಾಗ ಅಳವಡಿಸಬಹುದಾದ ಮಾನದಂಡಗಳನ್ನು ಕುರಿತು ವಿವರಿಸಿದರು. ಇದಾದ ತರುವಾಯ ಸಾರ್ವಜನಿಕ ಯೋಜನೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸುವುದು ಮತ್ತು ಗುಣಮಟ್ಟ ಕಾಯ್ದುಕೊಳ್ಳುವ ಕುರಿತಂತೆ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

- ಮೋಡಬಿತ್ತನೆ (Cloud Seeding) ಗಾಗಿ ರೂ.50ಕೋಟಿ 2 ವರ್ಷಗಳ ಅವಧಿಯ ಕಾರ್ಯಾಚರಣೆಗಾಗಿ ಲಭ್ಯವಾಗಲಿದ್ದು, ತತ್ಸಂಬಂಧ ವೈಜ್ಞಾನಿಕ ತಳಹದಿಯಲ್ಲಿ ತಾಂತ್ರಿಕವಾಗಿ ಕಾರ್ಯಸಿಂಧುತ್ವವಿರುವ ಕಾರ್ಯಾಚರಣೆಯ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು.
- ಈ ಕಾರ್ಯಾಚರಣೆಯ ಹಲವು ಹಂತದ ಅನುಮೋದನಾ ಪ್ರಕ್ರಿಯೆ ಹಾಗೂ ಸಚಿವ ಸಂಪುಟದ ಅನುಮೋದನೆ ಪಡೆದುಕೊಳ್ಳುವ ಮುನ್ನ ಅನುಸರಿಸಬೇಕಾಗಿರುವ ಮಾನದಂಡಗಳನ್ನು ಕುರಿತು ತತ್‌ಕ್ಷಣ ಪ್ರಕ್ರಿಯೆ ಪ್ರಾರಂಭಿಸುವುದು.
- ಟೆಂಡರ್ ಪ್ರಕ್ರಿಯೆಗೆ ಮುನ್ನ ಈಗಾಗಲೇ ಹಿಂದಿನ ಸಾಲುಗಳಲ್ಲಿ ಮೋಡಬಿತ್ತನೆ ನಡವಳಿಗಳನ್ನು ಕುರಿತು ಬಂದಿರುವ ಕರ್ನಾಟಕ ಮಹಾಲೇಖಪಾಲರ ಆಕ್ಷೇಪಣೆಗಳು, ಸಾರ್ವಜನಿಕ ಟೀಕೆ-ಟಿಪ್ಪಣಿಗಳು ಹಾಗೂ IMD ಮತ್ತು Drought cell ಮುಖ್ಯಸ್ಥರುಗಳು ತಿಳಿಸಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಂಭವನೀಯ ಪ್ರಶ್ನಾವಳಿಗಳಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಹೊಂದತಕ್ಕದ್ದು.
- ಬಿಡ್‌ದಾರರೊಂದಿಗೆ ಮಾತುಕತೆ ನಡೆಸಿ ಮೋಡಬಿತ್ತನೆ ಕಾರ್ಯಾಚರಣೆ ಗರಿಷ್ಠ ಮಿತವ್ಯಯದಲ್ಲಿ ಯಶಸ್ವಿಯಾಗುವಂತೆ ನೋಡಿಕೊಳ್ಳಬೇಕು.
- ಸಂಬಂಧಪಟ್ಟ ವಾಯುನೆಲೆಗಳಿಂದ ಅಗತ್ಯವಿರುವ ಪರವಾನಗಿಗಳನ್ನು ಪಡೆದುಕೊಂಡು 45-90 ದಿನಗಳ ಯಶಸ್ವಿ ಕಾರ್ಯಾಚರಣೆಗೆ ರೂ. <35ಕೋಟಿ ಅಂದಾಜಿನಲ್ಲಿ ಕಾರ್ಯತಂತ್ರವನ್ನು ರೂಪಿಸಬೇಕು.
- ಈ ಸಲುವಾಗಿ ಅಗತ್ಯವಿರುವ ಮೋಡಬಿತ್ತನೆ ಕಾರ್ಯಾಚರಣೆಯಲ್ಲಿ ಪರಿಣಿತರು ಮತ್ತು ಸೂಕ್ತ ಮಾಹಿತಿ ಹೊಂದಿರುವ ತಜ್ಞರನ್ನೊಳಗೊಂಡ ಸಮಿತಿಯನ್ನು ರಚಿಸಿ ಸರ್ಕಾರದ ಪ್ರಧಾನ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಪರಿವೀಕ್ಷಿಸಬೇಕು.

- ಗ್ರಾಮೀಣ ಕುಡಿಯುವ ನೀರಿನ ಬಾಬ್ತಿಗಾಗಿ ರಾಜ್ಯ ಮತ್ತು ಕೇಂದ್ರ ವಲಯದಡಿ OB ಬಾಬ್ತು ಸೇರಿ ಹಾಗೂ SCP/TSP ಮತ್ತು SDP ಹಾಗೂ DDP ಕಾರ್ಯಕ್ರಮಗಳಡಿ ಒಟ್ಟಾರೆ 2019-20ರ ಸಾಲಿಗೆ ಲಭ್ಯವಾಗಬಹುದಾದ ಅನುದಾನ ರೂ.3401.58ಕೋಟಿಗಳಿದ್ದು, ಇದಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಿಯಾ ಯೋಜನೆ ಸಿದ್ಧಪಡಿಸುವುದು.
- NRDWP (RWS) ಕ್ರಿಯಾ ಯೋಜನೆ ಸಿದ್ಧಪಡಿಸಲು ವಾಸ್ತವಿಕ ಬೇಡಿಕೆ ಗಮನದಲ್ಲಿಟ್ಟುಕೊಂಡು, ಹಾಲಿ ಮುಂದುವರಿದ ಯೋಜನೆಗಳು, MVS ಯೋಜನೆಗಳನ್ನು ಪೂರ್ಣಗೊಳಿಸುವುದು ಹಾಗೂ ಕುಡಿಯುವ ನೀರು ಸರಬರಾಜು ಪ್ರಮಾಣ ಹೆಚ್ಚಿಸಲು ಕೈಗೊಳ್ಳಬೇಕಾಗಿರುವ ಅಭಿವೃದ್ಧಿ ಯೋಜನೆಗಳಿಗೆ ಪೂರಕವಾಗಿ ಅನುದಾನ ಹಂಚಿಕೆ ಮಾಡುವಾಗ, ಈಗಾಗಲೇ ಹೆಚ್ಚಿನ ಅನುದಾನ ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಿರುವ ಜಿಲ್ಲೆಗಳಿಗೆ ವಾಸ್ತವಿಕ ಬೇಡಿಕೆ ಪರಿಶೀಲಿಸಿ, ಉಳಿದ ಸಮಸ್ಯಾತ್ಮಕ ಜಿಲ್ಲೆಗಳ ಜನ ವಸತಿಗಳಿಗೆ ಸೂಕ್ತ ಪ್ರಮಾಣದಲ್ಲಿ ಅನುದಾನ ಹಂಚಿಕೆ ಮತ್ತು ಯೋಜನೆಗಳ ಮಂಜೂರಾತಿ ಆಗಬೇಕು.
- ಅಗತ್ಯತೆ ಇಲ್ಲದಿದ್ದರೂ ಜಿಲ್ಲಾವಾರು ಸಾಮಾನ್ಯ ಗ್ರಾನೀಸ ಯೋಜನೆಗಳ ಅನುಷ್ಠಾನ ಮತ್ತು ನಿರ್ವಹಣಾ ಅನುದಾನಕ್ಕಿಂತ ಹೆಚ್ಚಿನ ಅನುದಾನ ನೀಡುವ ಅಗತ್ಯತೆಯಿರುವುದಿಲ್ಲ. ಇಂತಹ ಜಿಲ್ಲೆಗಳಿಗೆ ನೀಡುವ ಅನುದಾನದಿಂದ ಅನುದಾನ ಲಭ್ಯವಿದೆ ಎನ್ನುವ ಕಾರಣಕ್ಕೆ ಕ್ರಿಯಾ ಯೋಜನೆಗಳು ತಯಾರಾಗಬಾರದು. ಹಾಗೂ ಇಂತಹ ಪ್ರಕರಣಗಳಲ್ಲಿ/ಪ್ರದೇಶಗಳಿಗೆ ವಿಶೇಷ ಅನುದಾನ ಒದಗಿಸುವ ಪ್ರಮೇಯವಿರುವುದಿಲ್ಲ.
- MVSಗಳ ನಿರ್ವಹಣೆ ಹಾಗೂ O&M ಬಾಬ್ತಿಗಾಗಿ ಅಗತ್ಯವಿರುವ ನಿರ್ವಹಣಾ ಹಣವನ್ನು (ಕನಿಷ್ಠ ರೂ.100ಕೋಟಿ) ಕಾಯ್ದಿರಿಸಿ ಜಿಲ್ಲಾವಾರು ಹಂಚಿಕೆ ಮಾಡಬೇಕು.
- ಕುಡಿಯುವ ನೀರಿನ ಯೋಜನೆಗಳ ಕ್ರಿಯಾ ಯೋಜನೆ ತಯಾರಿಕೆಗಾಗಿ Pre & Post monsoon ನೀರು ಲಭ್ಯತೆ ಪ್ರಮಾಣ ಹಾಗೂ ನೀರಿನ ಗುಣಮಟ್ಟದ ಸಮೀಕ್ಷೆ/ಪರೀಕ್ಷಾ ವರದಿ ಆಧರಿಸಿ ವೈಜ್ಞಾನಿಕ ತಳಹದಿಯಲ್ಲಿ ಆಯಾಯ ಜಿಲ್ಲಾ ಪಂಚಾಯತಿಗಳು Online ನಲ್ಲಿ IMIS ತಂತ್ರಾಂಶದಲ್ಲಿ ದಾಖಲಿಸಿರುವ YDU ಅಂಕಿ ಅಂಶಗಳನ್ನು ಆಧರಿಸಿ ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳ CEOಗಳು EE/RWSಗಳು ನೀಡುವ ಮಾಹಿತಿಯನ್ನು ಖುದ್ದಾಗಿ ಪರಿಶೀಲಿಸಿ, ಅನುದಾನ ಬೇಡಿಕೆ ಪ್ರಸ್ತಾಪಗಳನ್ನು ಸರ್ಕಾರಕ್ಕೆ ಜಾಗ್ರತೆಯಾಗಿ ಸಲ್ಲಿಸಬೇಕೆಂದು ನಿರ್ದೇಶನ ನೀಡುವುದು.
- Spillover work ಕಾಮಗಾರಿಗಳು ಮತ್ತು ಹೊಸ work ಗಳು ಸೇರಿದಂತೆ ಪ್ರಸಕ್ತ ಸಾಲಿಗೆ ಕಳೆದ ಸಾಲಿನ ಮೇಲೆ 25% ಹೆಚ್ಚಳ ಅನುದಾನ ಹಂಚಿಕೆ ಮಾಡುವ ಬಗ್ಗೆ ಆಯುಕ್ತರು ಗ್ರಾನೀಸ ಪರಿಶೀಲಿಸಬೇಕು.
- ಮನೆಗಳಿಗೆ Household Connections ನೀರಿನ ಸಂಪರ್ಕ ಜೊತೆಗೆ Internal Distribution Network ಹಾಗೂ Pipeline ದುರಸ್ಥಿ ಸೇರಿದಂತೆ GPಗಳು O&M ಬಾಬ್ತು ನೋಡಿಕೊಳ್ಳಲು ಅಗತ್ಯವಿರುವ ಅನುದಾನ ಹಂಚಿಕೆ ಸಮರ್ಪಕವಾಗಿ ಮಾಡಬೇಕು.

- ಕ್ರಿಯಾ ಯೋಜನೆಗಳಿಗೆ ಮೇ-2019ರಲ್ಲಿಯೇ SLSSC ಅನುಮೋದನೆ ದೊರಕಿಸಿ ಜೂನ್-2019ರಲ್ಲಿಯೇ ಅನುಮೋದನೆ ದೊರಕಿಸಿಕೊಡುವ ವ್ಯವಸ್ಥೆ ಮಾಡಲು ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

(ಕ್ರಮ: ಆಯುಕ್ತರು, ಗ್ರಾನೀಸ)

**ಕೆರೆಗಳು, ಸುವರ್ಣ ಗ್ರಾಮೋದಯ ಮತ್ತು ರಸ್ತೆಗಳು:-**

- ಕೆರೆಗಳು ಬಾಬ್ತಿನಡಿ ಸಾಮಾನ್ಯ SDP, SCP/TSP ಯಡಿ ಲಭ್ಯವಿರುವ ಸಂಪೂರ್ಣ ಅನುದಾನವನ್ನು ಸಮರ್ಪಕವಾಗಿ ಕಾಲಮಿತಿಯೊಳಗೆ ವಿನಿಯೋಗಿಸಲು ಕ್ರಿಯಾ ಯೋಜನೆಯನ್ನು ತಕ್ಷಣ ರೂಪಿಸಿ ಅನುಮೋದನೆ ನೀಡಬೇಕು.
- 'ಜಲಾಮೃತ' ಯೋಜನೆಯನ್ನು ನರೇಗಾ ಒಗ್ಗೂಡಿಸುವಿಕೆಯೊಂದಿಗೆ ಯಶಸ್ವಿಗೊಳಿಸಲು ಕಾರ್ಯಸಿಂಧುತ್ವವಿರುವ ಕ್ರಿಯಾ ಯೋಜನೆ ಸಿದ್ಧಪಡಿಸಬೇಕು. ಕಳೆದ ಸಾಲಿನ OB ಯಡಿ ಉಳಿತಾಯವಾಗುವ ಸಂಭವನೀಯ ರೂ.6ಕೋಟಿಗಳನ್ನು ಈ ಬಾಬ್ತಿಗಾಗಿ ಬಳಸುವುದು.
- ಕೆರೆಗಳು ಬಾಬ್ತಿನ ಕ್ರಿಯಾ ಯೋಜನೆ ಸಿದ್ಧಪಡಿಸುವಾಗ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸ್ಥಳೀಯ ಅಗತ್ಯತೆ ಪರಿಶೀಲಿಸಿ ನರೇಗಾ ಮತ್ತು untied grants of PRIs ಸಂಯೋಜನೆಯಲ್ಲಿ/ಒಗ್ಗೂಡಿಸುವಿಕೆಯಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಲು ಕ್ರಮವಹಿಸಬೇಕು.
- ಸುವರ್ಣ ಗ್ರಾಮೋದಯ/ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಮುಂದುವರಿದ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಬಾಕಿ ಬಿಲ್‌ಗಳನ್ನು ಪೂರ್ಣವಾಗಿ ಇತ್ಯರ್ಥಗೊಳಿಸಬೇಕು.
- ಗ್ರಾಮೀಣ ಭಾಗದ 8,000 ಕಿ.ಮೀ ರಸ್ತೆಗಳ ಅಭಿವೃದ್ಧಿಗಾಗಿ ಕೇಂದ್ರ ವಲಯದಡಿ PMGSYನಡಿ ಸ್ವೀಕೃತವಾಗುವ ಅನುದಾನವನ್ನು ಗಮನದಲ್ಲಿಟ್ಟುಕೊಂಡು ಪ್ರಸಕ್ತ ಸಾಲಿಗೆ ಒದಗಿಸಿರುವ ಅನುದಾನವನ್ನು ಶೀಘ್ರವಾಗಿ ಬಳಸಲು ಕ್ರಮವಹಿಸಬೇಕು. ಹೀಗೆ ಮಾಡುವಾಗ ಲೆಕ್ಕಶೀರ್ಷಿಕೆ 3054 ಮತ್ತು 5054 ರಡಿ ಅಭ್ಯವಾಗುವ ಅನುದಾನ ಮತ್ತು ಮನ್ಯ ಶಾಸಕರುಗಳಿಗೆ ನೇರವಾಗಿ ಒದಗಿಸುವ ಸಂಪನ್ಮೂಲಗಳಡಿ ಪ್ರಸ್ತಾಪವಾಗುವ ರಸ್ತೆಗಳನ್ನು ಹೊರತುಪಡಿಸಿ, ಲಭ್ಯವಾಗುವ ಅನುದಾನ ಸಮರ್ಪಕವಾಗಿ ವಿನಿಯೋಗವಾಗಲು ಕ್ರಮವಹಿಸಬೇಕು.
- Road Mapping, Core Networks Mapping ದಾಖಲೆಗಳನ್ನು Update ಮಾಡಿಕೊಳ್ಳಬೇಕು.
- 3054 ಲೆಕ್ಕಶೀರ್ಷಿಕೆಯಡಿ ಕಳೆದ 3 ವರ್ಷಗಳಿಗೆ ಸಂಬಂಧಿಸಿದಂತೆ, ವರ್ಷಾವಾರು ಜಿಲ್ಲಾವಾರು ಅನುದಾನ ಲಭ್ಯತೆ, ವೆಚ್ಚ ಹಾಗೂ ನಿರ್ಮಾಣ ಮಾಡಿದ ರಸ್ತೆಗಳ ವಿವರಗಳನ್ನು ಧೃಢೀಕರಿಸಿ ತಕ್ಷಣ ಮಂಡಿಸಬೇಕು.
- ರಸ್ತೆಗಳು ಸಲುವಾಗಿ ಲೆಕ್ಕಶೀರ್ಷಿಕೆ 3054 ಮತ್ತು 5054, NABARD/RIDF, SDP, SCP/TSP ಯಡಿ ಲಭ್ಯವಿರುವ ಅನುದಾನಕ್ಕೆ ಸಂಬಂಧಿಸಿದ ಕ್ರಿಯಾ ಯೋಜನೆಯನ್ನು ಜಾಗ್ರತೆಯಾಗಿ ಸೂಕ್ತ ಮಾನದಂಡಗಳನ್ನಾಧರಿಸಿ ಸಿದ್ಧಪಡಿಸಿ ಕಳುಹಿಸಲು ಜಿಲ್ಲಾ ಪಂಚಾಯತ್‌ಗಳಿಗೆ ನಿರ್ದೇಶನ ಕಳುಹಿಸಿ ಕಾಲಮಿತಿ ಗೊತ್ತುಪಡಿಸಬೇಕು.

- Online ನಲ್ಲಿ ಭೌತಿಕ ಮತ್ತು ಆರ್ಥಿಕ ಪ್ರಗತಿ ದಾಖಲೆಯಾಗಬೇಕು. ವೆಚ್ಚದ ವಿವರಗಳು TNMC ಮತ್ತು ಗಾಂಧಿಸಾಕ್ಷಿ ಕಾಯಕಕ್ಕೆ ಸರಿಯಾಗಿ ಹೊಂದಾಣಿಕೆಯಾಗಬೇಕು.

(ಕ್ರಮ: ನಿರ್ದೇಶಕರು, ಸುವರ್ಣ ಗ್ರಾಮೋದಯ)

- ಜೈವಾನಿಲ ಅಭಿವೃದ್ಧಿ ಯೋಜನೆಯಡಿ ಕೇಂದ್ರ ಸರ್ಕಾರದ ಅನುದಾನದೊಂದಿಗೆ ಚಾಲ್ತಿ ಮಾರ್ಗಸೂಚಿಗಳನ್ವಯ ಜಿಲ್ಲಾವಾರು ಕ್ರಿಯಾ ಯೋಜನೆಗೆ **ಜೂನ್-2019**ರೊಳಗೆ ಅನುಮೋದನೆ ನೀಡಬೇಕು.

- ಜಿಲ್ಲಾ ಪಂಚಾಯತ್ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆ ಸಂಬಂಧ ಜಿಲ್ಲಾವಾರು ಬೇಡಿಕೆಯಾಧರಿಸಿ ಆರ್ಥಿಕ ಇಲಾಖೆ ಹಂಚಿಕೆ ಮಾಡುವ ರೂ.40.14ಕೋಟಿ ಅನುದಾನಕ್ಕೆ ಸಂಬಂಧಿಸಿದಂತೆ **ಜೂನ್-2019**ರೊಳಗೆ ಕ್ರಿಯಾ ಯೋಜನೆ ಪಡೆದು ಅನುಮೋದನೆ ನೀಡಬೇಕು.

**(ಕ್ರಮ: ನಿರ್ದೇಶಕರು, RI-II)**

- ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ನೂತನ ಕಛೇರಿ ಸಂಕೀರ್ಣದ ಜೊತೆಗೆ ಅಗತ್ಯವಿರುವ ತರಬೇತಿ ಮತ್ತು ಶಿಕ್ಷಣಾರ್ಥಿಗಳ ವಾಸ್ತವ್ಯ ಸಲುವಾಗಿ ಡಾರ್‌ಮಿಟರಿ/ಹಜಾರ ಮತ್ತು ವಸತಿ ಗೃಹಗಳನ್ನು ನಿರ್ಮಿಸಲು ಈಗಾಗಲೇ ಲಭ್ಯವಿರುವ ಅನುದಾನದ ಜೊತೆಗೆ DRC ಹಾಗೂ SPRC ಅನುದಾನವನ್ನು ಬಳಸಿಕೊಂಡು ಸಾರ್ವಜನಿಕ ಹಿತದೃಷ್ಟಿಯಿಂದ ಸುಸಜ್ಜಿತ ಕಛೇರಿ ಸಂಕೀರ್ಣ ಹಾಗೂ ತರಬೇತಿ ಮತ್ತು ವಸತಿ ಗೃಹಗಳ ನಿರ್ಮಾಣ ಸಲುವಾಗಿ ಸೂಕ್ತ ಕಾರ್ಯಸಿಂಧುತ್ವವಿರುವ ಕಟ್ಟಡ ನಿರ್ಮಾಣ ಮಾಡಿಸಲು ಕ್ರಮ ಕೈಗೊಳ್ಳಬೇಕು.

**(ಕ್ರಮ: ನಿರ್ದೇಶಕರು RI-II ಮತ್ತು ನಿರ್ದೇಶಕರು PR-II)**

- ರಾಜ್ಯ ಚುನಾವಣಾ ಆಯೋಗದ ವೆಚ್ಚಗಳನ್ನು ಕುರಿತು ಮಾಹಿತಿ ಇಂಧೀಕರಿಸಿ DSSನಲ್ಲಿ ಅಂಕಿ ಅಂಶಗಳನ್ನು ಸರಿಯಾಗಿ ದಾಖಲಿಸಬೇಕು.

- ರಾಜ್ಯ ಚುನಾವಣಾ ಆಯೋಗದ ಸಂಭವನೀಯ ವೆಚ್ಚದ ವಿವರಗಳನ್ನು ವಾಸ್ತವಿಕತೆ ಆಧಾರದಲ್ಲಿ ಸಲ್ಲಿಸಬೇಕು.

- ಅಬ್ದುಲ್ ನಜೀರ್ ಸಾಬ್ ತರಬೇತಿ ಸಂಸ್ಥೆ ಆಡಳಿತಾತ್ಮಕ ಮತ್ತು ಸಿಬ್ಬಂದಿ ವೆಚ್ಚ ಕುರಿತು ವಾಸ್ತವಿಕ ಅಂಕಿ ಅಂಶಗಳನ್ನು ದಾಖಲಿಸಬೇಕು.

- ಪ್ರಾದೇಶಿಕ ತರಬೇತಿ ಸಂಸ್ಥೆಯ ಕಟ್ಟಡ ನಿರ್ಮಾಣ (SIRD) ಸಲುವಾಗಿ ಮೂಲ ಅಂದಾಜು, ಪರಿಷ್ಕೃತ ಅಂದಾಜು ಹಾಗೂ ಲಭ್ಯವಿರುವ ಅನುದಾನವನ್ನು ಗಣನೆಗೆ ತೆಗೆದುಕೊಂಡು ಧಾರವಾಡ ಪ್ರಾದೇಶಿಕ ತರಬೇತಿ ಕೇಂದ್ರದ ಕಟ್ಟಡದ ಅವಶ್ಯಕತೆಗನುಗುಣವಾಗಿ ಅಗತ್ಯವಿರುವ ಸಾಮಗ್ರಿ, ಸಲಕರಣೆ, Furnituresಗಳನ್ನು ಮೂಲ ಅಂದಾಜಿನೊಳಗೆ ಸೇರಿರದಿದ್ದಲ್ಲಿ ನಿಯಮಾನುಸಾರ ಅವುಗಳನ್ನು ಅಳವಡಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡು 2019-20ರ ಸಾಲಿಗೆ ಒದಗಿಸಿರುವ ರೂ.10ಕೋಟಿ ವಿನಿಯೋಗ ಮಾಡಬೇಕು.

- SIRD ಮತ್ತು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯದಡಿ ವೇತನ ಮತ್ತು ಹೊರಗುತ್ತಿಗೆ ಸಂಬಂಧಿಸಿದಂತೆ ಮತ್ತು ಆಡಳಿತಾತ್ಮಕ ವೆಚ್ಚಗಳಿಗೆ ಸಂಬಂಧಿಸಿದಂತೆ ಲೆಕ್ಕಶೀರ್ಷಿಕೆ ಸರಳೀಕರಣಗೊಳಿಸುವುದು.
- ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯದಡಿ ಸಾಮಾನ್ಯ ಹಾಗೂ ನೌಕರರ ವೆಚ್ಚ ಸಂಬಂಧ ಒದಗಿಸಿರುವ ರೂ.15.87ಕೋಟಿಗಳಿಗೆ ವಿವರಗಳನ್ನು ಒದಗಿಸಬೇಕು. ಇದರಲ್ಲಿ ಕಳೆದ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ಮತ್ತು ವೆಚ್ಚದ ವಿವರಗಳನ್ನು ಗಮನಿಸಿ ಪ್ರಸಕ್ತ ಸಾಲಿನ ವಾಸ್ತವಿಕ ಬೇಡಿಕೆ ಆಧರಿಸಿ ಮಿತವ್ಯಯ ಅನುಸರಿಸುವುದು ಮತ್ತು ಉಳಿದ ಅನುದಾನವನ್ನು ಬಂಡವಾಳ ವೆಚ್ಚಗಳಡಿ ಅಗತ್ಯವಿರುವ ವಿಶ್ವವಿದ್ಯಾನಿಲಯದ ಅಥವಾ ಇತರೆ ಕಟ್ಟಡಗಳ ಬಾಬ್ತು ವಿನಿಯೋಗಿಸಲು ಪರಿಶೀಲಿಸಿ ಶೀಘ್ರ ನಿರ್ಣಯ ಕೈಗೊಳ್ಳಬೇಕು.
- ವಿಶ್ವವಿದ್ಯಾನಿಲಯದಲ್ಲಿನ ವಿದ್ಯಾರ್ಥಿನೀಯರು ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸಂಯೋಜಿತ ಆಡಳಿತಾತ್ಮಕ ಸಂಪನ್ಮೂಲ ಸ್ಥಾಪಿಸಲು, ಸ್ಥಳ ಪರಿಶೀಲನೆ ಮಾಡಿ ನಿರ್ಧಾರ ಕೈಗೊಳ್ಳಬೇಕು.
- ಗ್ರಾಮೀಣಾಭಿವೃದ್ಧಿ ಭವನ ಮತ್ತಿತರೆ ಕಟ್ಟಡಗಳ ಬಾಬ್ತು ಲಭ್ಯವಿರುವ ರೂ.20ಕೋಟಿಗಳ ಜೊತೆಗೆ GoI ನಿಂದ RGSY ಸಲುವಾಗಿ ಲಭ್ಯವಿರುವ ಅನುದಾನ, SIRD ಬಾಬ್ತಿನಡಿ ಉಳಿಯುವ ಅನುದಾನ ಹಾಗೂ BRGF ನಿಂದ ಒದಗಿಸಿ KRRIDL ನಲ್ಲಿ 2006-07ರ ಸಾಲಿನಿಂದ ಉಳಿದುಕೊಂಡಿರುವ ರೂ.5.5ಕೋಟಿ ಅನುದಾನ ಮತ್ತು ಅದರ ಮೇಲೆ ಗಳಿಕೆಯಾಗಿರುವ ಬಡ್ಡಿ ಇವುಗಳನ್ನು ಗಣನೆಗೆ ತೆಗೆದುಕೊಂಡು RDPR ಇಲಾಖೆಯ ಎಲ್ಲಾ ನಿರ್ದೇಶನಾಲಯಗಳು, ಗ್ರಾಮೀಣ ನೀರು ಪೂರೈಕೆ ಹಾಗೂ ಇಲಾಖೆಯ ಇತರೆ ಅಂಗ ಸಂಸ್ಥೆಗಳು ಒಂದೆಡೆ ಕಾರ್ಯಾರಂಭವಾಗುವಂತೆ ಗ್ರಾಮೀಣಾಭಿವೃದ್ಧಿ ಭವನ-II ನಿರ್ಮಾಣ ಕುರಿತು ಪ್ರಧಾನ ಕಾರ್ಯದರ್ಶಿಗಳು ಕೂಡಲೇ ಸಭೆ ನಡೆಸಿ ಮುಖ್ಯ ಇಂಜಿನೀಯರುಗಳೊಂದಿಗೆ ಸಮಾಲೋಚಿಸಿ ಅಂತಿಮ ನಿರ್ಣಯಕ್ಕೆ ಪ್ರಸ್ತಾಪಿಸುವುದು.
- ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಅನುದಾನ ಹೆಚ್ಚಳವಾಗಿರುವ ಕುರಿತು ಭೌಗೋಳಿಕ ಮತ್ತು ಸದಸ್ಯರುಗಳ ಬಲ ಆಧರಿಸಿ ಅನುದಾನ ಹಂಚಿಕೆ ಮಾಡಿ ಜೂನ್-2019ರೊಳಗೆ ಅಭಿವೃದ್ಧಿ ಕ್ರಿಯಾ ಯೋಜನೆಗಳಿಗೆ ಮಂಜೂರಾತಿ ನೀಡಬೇಕು.
- ಸಚಿವ ಸಂಪುಟದ ಮುಂದೆ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸು, 2019-20ರಲ್ಲಿ ನೀಡಲಾದ ಅನುದಾನ ಹೆಚ್ಚಳ ಕುರಿತು ಪ್ರಸ್ತಾಪ ಸಲ್ಲಿಸಬೇಕು.
- 14ನೇ ಹಣಕಾಸು ಆಯೋಗದ ಅನುದಾನ ಸಂಬಂಧ ಜಾಗ್ರತೆಯಾಗಿ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಿ ಸ್ಥಳೀಯ ಸಂಸ್ಥೆಗಳು ಅದರ ಸದ್ವಿನಿಯೋಗ ಮಾಡಿಕೊಳ್ಳುವಂತೆ ವ್ಯವಸ್ಥೆ ಮಾಡಿಕೊಳ್ಳಬೇಕು. ಈ ಸಲುವಾಗಿ Online ನಲ್ಲಿ ತಂತ್ರಾಂಶ ಸಿದ್ಧಪಡಿಸಿ check list ನೀಡಿ GoI ಮಾರ್ಗಸೂಚಿಗಳ ಪ್ರಕಾರ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಂದ ಮಾಹಿತಿ ಪಡೆದುಕೊಂಡು ಇನ್ನೂ ಹೆಚ್ಚಿನ ಅನುದಾನವನ್ನು ಭಾರತ ಸರ್ಕಾರದಿಂದ ಪಡೆಯಲು ಕ್ರಮ ಕೈಗೊಳ್ಳಬೇಕು.
- KPR Act ಅನುದಾನ ರೂ.28ಕೋಟಿಗಳಲ್ಲಿ ರೂ.11ಕೋಟಿಗಳನ್ನು ಗಾಂಧಿ ಗ್ರಾಮ ಪುರಸ್ಕಾರ್ ಮತ್ತಿತರೆ ಪ್ರಾಧಿಕಾರಗಳ ಸಂಭಾವನೆ, ವೇತನ ಹಾಗೂ ಪ್ರಸಕ್ತ DAC cell ಕಾರ್ಯಾಚರಣೆಗಾಗಿ

ಅಗತ್ಯವಿರುವ ಅನುದಾನ ಒದಗಿಸಿ ಉಳಿದ ರೂ.17ಕೋಟಿಗಳನ್ನು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕಟ್ಟಡಗಳ ಬೇಡಿಕೆಗೆ ಪೂರಕವಾಗಿ ಪ್ರಸ್ತಾವನೆಗಳನ್ನು ಕೂಡಲೇ ಮಂಡಿಸಬೇಕು.

- ಚುನಾವಣಾ ನೀತಿ ಸಂಹಿತೆ ಪೂರ್ಣಗೊಂಡ ಕೂಡಲೇ ಸರ್ಕಾರವು ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ದ್ವಿಗುಣಗೊಳಿಸಿರುವ untied grants ಅಭಿವೃದ್ಧಿ ಅನುದಾನ ನಿರ್ಣಯವನ್ನು ಸಾರ್ವಜನಿಕ ಮಾಹಿತಿಗಾಗಿ "ರಾಜ್ಯದ ಹೆಜ್ಜೆ ಪಂಚಾಯತಿ ರಾಜ್ ಸಬಲೀಕರಣದೆಡೆಗೆ" ಎಂಬ ಶೀರ್ಷಿಕೆಯೊಂದಿಗೆ ಹೆಸರಾಂತ ಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಬೇಕು.
- ನಿರ್ದೇಶಕರು, ಪಂಚಾಯತ್ ರಾಜ್ ಹಾಲಿ ಇರುವ ಸ್ಥಳೀಯ ಪಂಚಾಯತ್ ರಾಜ್ ಸಂಸ್ಥೆಗಳ ನೌಕರರ ವೇತನ ಬಾಬ್ತಿಗೆ ಕೊರತೆಯಾಗಿರುವ ರೂ.300ಕೋಟಿ ಸಲುವಾಗಿ ಹೆಚ್ಚುವರಿ ಅನುದಾನ ಪಡೆದುಕೊಳ್ಳಲು ಆರ್ಥಿಕ ಇಲಾಖೆಯನ್ನು ಹಿಂಬಾಲಿಸಲು ಕ್ರಮ ಕೈಗೊಳ್ಳುವುದು.

(ಕ್ರಮ: ನಿರ್ದೇಶಕರು, **PR-I & II**)

- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ವಿಭಾಗಗಳಲ್ಲಿ/ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಖಾಯಂ ಹಾಗೂ ತಾತ್ಕಾಲಿಕ ನೌಕರರು ಮತ್ತು ಆಡಳಿತಾತ್ಮಕ ವೆಚ್ಚಗಳ ಬಾಬ್ತಿಗಾಗಿ ಲೆಕ್ಕಶೀರ್ಷಿಕೆ ಸರಳೀಕರಣ ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ IFA ಮತ್ತು ಆಡಳಿತ ಶಾಖೆಯವರು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಸೂಕ್ತ ಪ್ರಸ್ತಾಪ ಮಂಡಿಸಬೇಕು.

(ಕ್ರಮ: IFA ಮತ್ತು DS admin I & II)

- e-Governance ಬಾಬ್ತಿನಡಿ ನೀಡಿರುವ ರೂ.21ಕೋಟಿ ಅನುದಾನದ ವತಿಯಿಂದ ಗಣಕೀಕರಣ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಹಾಗೂ ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ಸಂಗ್ರಹಣೆ ಮತ್ತು ಸಂಪನ್ಮೂಲಗಳ digitalisation ಸಲುವಾಗಿ ಕ್ರಮ ಕೈಗೊಳ್ಳಲು ಸರ್ಕಾರದ ಪ್ರಧಾನ ಕಾರ್ಯದರ್ಶಿರವರು ಪರಿಶೀಲಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವುದು.

(ಕ್ರಮ: ನಿರ್ದೇಶಕರು, e-ಆಡಳಿತ)

(ಎಲ್.ಕೆ.ಅತೀಕ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಂಖ್ಯೆ:ಗ್ರಾಅಪ/23/ಯೋಉಮಾ/2019 ದಿನಾಂಕ: 13/05/2019

ಇವರಿಗೆ:

1. ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

2. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ.
3. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ.
4. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್.
5. ನಿರ್ದೇಶಕರು, ಪಂಚಾಯತ್ ರಾಜ್– 1/ಪಂಚಾಯತ್ ರಾಜ್–2/ಸ್ವ.ಉ.ಕಾ./ಗ್ರಾಮ ವಿಕಾಸ/ಇ–ಆಡಳಿತ/ಆಂತರಿ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
6. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, MSIL ಕಟ್ಟಡ, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು.
7. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ.
8. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ.ಇಲಾಖೆ, ಬೆಂಗಳೂರು.
9. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ, ಬೆಂಗಳೂರು.
11. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ.
12. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ.
13. ಅಪರ ನಿರ್ದೇಶಕರು, ಎಸ್.ಬಿ.ಎಂ.

ಪ್ರತಿ ಮಾಹಿತಿಗಾಗಿ ಸಲ್ಲಿಸಿದೆ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿರವರಿಗೆ, ಕರ್ನಾಟಕ ಸರ್ಕಾರ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.